# ಮುದ್ದುಮಕ್ಕಳ ಸುಂದರ ಕನಸುಗಳಿಗೆ ಕೊರೊನಾ ಕೊಳ್ಳಿ



■ ಎನ್.ವಿ. ವಾಸುದೇವ ಶರ್ಮಾ
ಕಾರ್ಯಕಾರೀ ನಿರ್ದೇಶಕ,
ಚೈಲ್ಡ್ ರೈಟ್ಸ್ ಟ್ರಸ್ಟ್ (ಸಿ.ಆರ್.ಟಿ)

ಕುಟುಂಬ ಮತ್ತು ಸಮಾಜದ ಬಹುತೇಕ ಚಿಂತನೆಗಳು ಮಕ್ಕಳ ಕಾಳಜಿಯನ್ನು ಕೇಂದ್ರವಾಗಿಟ್ಟುಕೊಂಡಿರುತ್ತವೆ. ಸದ್ಯದ ಕೊರೊನಾ ಸೋಂಕು ನಮಗರಿವಿಲ್ಲದಂತೆಯೇ ಮಕ್ಕಳ ಮೇಲೆ ಪ್ರಹಾರ ನಡೆಸುತ್ತಿದೆ. ಈ ಪ್ರಹಾರ ಸೋಂಕಿನ ರೂಪದ್ದು ಮಾತ್ರವಲ್ಲ. ಶಾಲೆಗಳನ್ನು ಮುಚ್ಚಿ ಮಕ್ಕಳನ್ನು ಮನೆಯ ಚೌಕಟ್ಟಿಗೆ ಸೀಮಿತಗೊಳಿಸಿರುವುದು ಕೂಡ ಮಕ್ಕಳ ಜಗತ್ತಿನಲ್ಲಿ ಸಮಸ್ಯೆಗಳನ್ನು ಉಂಟುಮಾಡಿದೆ. ಒಂದೆಡೆ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳು ಮಕ್ಕಳನ್ನು ಬಾಧಿಸುತ್ತಿದ್ದರೆ, ಇನ್ನೊಂದೆಡೆ ಕುಟುಂಬದ ಸಂಕಷ್ಟಗಳಿಗೆ ಎಳೆಯರು ಹೆಗಲು ನೀಡಬೇಕಾದ ಸಂದರ್ಭವೂ ಎದುರಾಗಿದೆ. ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹಗಳಿಗೆ ಕೊರೊನಾ ಸಂದರ್ಭ ಉಂಟು ಮಾಡಿರುವ ಬಿಕ್ಕಟ್ಟು ಪೂರಕವಾಗಿದೆ. ಕೊರೊನಾ ಎರಡನೇ ಅಲೆಯಲ್ಲಿ ಸಾವಿಗೀಡಾಗುತ್ತಿರುವವರಲ್ಲಿ ಯುವ ತಂದೆತಾಯಿಯರ ಸಂಖ್ಯೆಯೂ ಗಮನಾರ್ಹ ಪ್ರಮಾಣದಲ್ಲಿ ಇರುವುದರಿಂದ, ಅಪ್ಪಅಮ್ಮನನ್ನು ಕಳೆದುಕೊಳ್ಳುತ್ತಿರುವ ಮಕ್ಕಳ ಸಂಖ್ಯೆಯೂ ಹೆಚ್ಚುತ್ತಿದೆ. ಕೊರೊನಾ ಕಾರಣದಿಂದಾಗಿ ಮಕ್ಕಳನ್ನು ಆವರಿಸುವ ತಬ್ಬಲಿತನ ಮುಂದಿನ ತಲೆಮಾರನ್ನು ಗಂಭೀರವಾಗಿ ಕಾಡಲಿದೆ. ಮಕ್ಕಳ ಲೋಕದ ಸಮಸ್ಯೆಗಳ ಬಗ್ಗೆ ಯೋಚಿಸುವಷ್ಟು ವ್ಯವಧಾನ ನಮ್ಮ ಸಮಾಜಕ್ಕೆ ಇದೆಯೇ?